ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಸಿರುಗುಪ್ಪ

**ಸಿ.ಸಿ.ನಂ: 682/2020**

ದೂರುದಾರರುಃ ರಾಜ್ಯದ ಪರವಾಗಿ ಸಬ್ ಇನ್ಸ್ಪೆಕ್ಟರ್ ಆಫ್ ಪೋಲಿಸ್, ತೆಕ್ಕಲಕೋಟೆ.

- ವಿರುದ್ಧ -

ಆಪಾಧಿತರುಃ
ಎ1) ದೇವೇಂದ್ರಪ್ಪ ಕೆ. ಬಿನ್ ಸಿದ್ದಪ್ಪ, ವಯಸ್ಸುಃ 28 ವರ್ಷ,
ಎ2) ರಾಮಪ್ಪ ಕೆ. ಬಿನ್ ಕುರಿ ರಂಗಪ್ಪ, ವಯಸ್ಸುಃ 38 ವರ್ಷ,
ಇಬ್ಬರ ವಾಸಃ ಬೈರಾಪುರ ಗ್ರಾಮ, ಸಿರುಗುಪ್ಪ ತಾಲೂಕು, ಬಳ್ಳಾರಿ ಜಿಲ್ಲೆ.

ನಾನು ಅಶೋಕ ಆರ್.ಹೆಚ್., ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.ಸಿರುಗುಪ್ಪ., ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆಯನ್ನು ಮಾಡುತ್ತಿದ್ದೇನೆ.

## ದೋಷಾರೋಪಣೆ

ದಿನಾಂಕಃ 19.04.2020 ರಂದು ಮಧ್ಯಾಹ್ನ 3-25 ಗಂಟೆ ಸುಮಾರಿಗೆ ತೆಕ್ಕಲಕೋಟೆ ಪೊಲೀಸ್ ಠಾಣೆಯ ಸರಹದ್ದಿನಲ್ಲಿ ಬಲಕುಂದಿ ಗ್ರಾಮದ ಕಡೆಗೆ ಬೂದುಗುಪ್ಪ ಕಡೆಗೆ 1 ನೇ ಆರೋಪಿಯಾದ ನೀವು ನಿಮ್ಮ ಲಗೇಜ್ ಆಟೋ ನಂ.ಕೆಎ 34 ಬಿ 8518 ನೇದ್ದರಲ್ಲಿ 2 ನೇ ಆರೋಪಿಯವರನ್ನು ಹಿಂಭಾಗದಲ್ಲಿ ಕೂಡಿಸಿಕೊಂಡು ಸರ್ಕಾರದ ಯಾವುದೇ ಅಧಿಕೃತ ಪರವಾನಿಗೆ ಪಡೆದುಕೊಳ್ಳದೇ ರೂ.1000/- ಬೆಲೆ ಬಾಳುವ ಒಂದು ಬಿಳಿ ಬಣ್ಣದ ಕ್ಯಾನ್ ನಲ್ಲಿ ಅಂದಾಜು 10 ಲೀ ಕಳ್ಳಭಟ್ಟಿ ಸರಾಯಿಯನ್ನು ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡು ಮಾರಾಟ ಮಾಡಲು ಸಾಗಾಟ ಮಾಡುತ್ತಿದ್ದು, ಆ ಮೂಲಕ ಆರೋಪಿತರಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ **32** ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅನಧಿಕೃತವಾಗಿ ಸರ್ಕಾರದ ಪರವಾನಿಗೆ ಪಡೆದುಕೊಳ್ಳದೇ ಈ ಮೇಲೆ ತಿಳಿಸಿದ ಕಳಭಟ್ಟಿ ಸರಾಯಿಯನ್ನು ವಶಪಡಿಸಿಕೊಂಡಿದ್ದಾಗಿ, ಆ ಮೂಲಕ ಆರೋಪಿತರಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ **34** ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಕೊನೆಯದಾಗಿ ಮೇಲೆ ನಮೂದಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು, ಸರ್ಕಾರದ ಯಾವುದೇ ಅನುಮತಿ ಇಲ್ಲದೇ ಅನಧಿಕೃತವಾಗಿ ಕಳ್ಳ ಭಟ್ಟಿ ಸರಾಯಿಯನ್ನು ಹೊಂದಿ ಸದರಿ ವಸ್ತುಗಳು ಮಾನವನ ಸೇವೆಗೆ ಯೋಗ್ಯವಲ್ಲದ ಮಾದಕ ವಸ್ತುಗಳೆಂದು ತಿಳಿದರೂ ಸಹ ಸಾರ್ವಜನಿಕರಿಗೆ ಮಾರಾಟ ಮಾಡಲು ಪ್ರದರ್ಶಣೆ ಮಾಡಿದ್ದು, ಆ ಮೂಲಕ

ಭಾ.ದಂ.ಸಂ.ಕಲಂ.273, 284 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಡಿಯಲ್ಲಿ ಎಸಗಿದ್ದೀರಿ.

ಪ್ರಶ್ನೆ -1. ನೀವು ಈ ಮೇಲೆ ಓದಿ ಹೇಳಿದ ಆಪಾಧನೆಯನ್ನು ಅರ್ಥ ಮಾಡಿಕೊಂಡಿದ್ದೀರಾ?

ಉತ್ತರ- ಆ – 1

ಆ - 2

ಪ್ರಶ್ನೆ -2 ನೀವು ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಪ್ರಕರಣ ನಡೆಸುತ್ತೀರಾ?

ಉತ್ತರ- ಆ – 1

ಆ - 2

(ಆಪಾದಿತರ ಹೇಳಿಕೆಯನ್ನು ನನ್ನ ಸಮ್ಮುಖದಲ್ಲಿ ಪಡೆದುಕೊಂಡಿದ್ದು, ಸದರಿ ಹೇಳಿಕೆಯು ಆಪಾಧಿತರ ಸಂಪೂರ್ಣ ಮತ್ತು ಸರಿಯಾದ ಹೇಳಿಕೆಯನ್ನು ಒಳಗೊಂಡಿರುತ್ತದೆ.)

ದಿಃ 02-07-2026

ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಸಿರುಗುಪ್ಪ.